## ಪ್ರಾದೇಶಿಕ ಸೊಗಡು

‘ಈಗಿದು ಬರದ ಭೂಮಿಯಲ್ಲ’ (ಜು. 03, ಜಯಲಕ್ಷ್ಮಿ ಪಾಟೀಲ) ‘ಚೆನ್ನುಡಿ’ ಮಾಹಿತಿಪೂರ್ಣ ಬರಹ. ಪ್ರಾದೇಶಿಕ ಸೊಗಡಿನಲ್ಲಿ ಸೇರಿ ಮಾವು, ದ್ರಾಕ್ಷಿ, ನಿಂಬೆ, ಡ್ರ್ಯಾಗನ್ ಸವಿದು ಬಿಳಿ ಎಲೆ ಹಾಕಿಕೊಂಡು ಸಿದ್ಧೇಶ್ವರ ಸ್ವಾಮೀಜಿ ಅವರ ಪ್ರವಚನ ಕೇಳಿಬಂದಷ್ಟು ಸಂತೋಷವಾಯಿತು. ಬಿಸಿಲ ನಾಡಿನ ಬಿಸಿಲು ಸ್ವಲ್ಪವೂ ಕಾಡಲಿಲ್ಲ.

—ಡಾ. ಮಹಾಬಲರಾಜು ಡಿ.ಕೆ., ದಾವಣಗೆರೆ



## ಬಿಜಾಪುರದ ಗತ್ತು-ಗಮ್ಮತ್ತು

ಸುಪ್ರಸಿದ್ಧ ಗೋಲಗುಮ್ಮಟದ ನೆಲೆವೀಡಾದ ಬಿಜಾಪುರದ ಬಗ್ಗೆ ‘ಚೆನ್ನುಡಿ’ ಅಂಕಣದಲ್ಲಿ, ನಿಂಬಿಯ ಬನದ ಮೇಲೆ ಅವರು ಚೆಂಡಾಡಿದ ಅನುಭವಗಳನ್ನು ಚೆನ್ನಾಗಿ ಪ್ರಸ್ತುತಪಡಿಸಿದ್ದಾರೆ. ಮೈಸೂರು ಚಿಗುರೆಲೆ ಗೊತ್ತಿದ್ದ ನಮಗೆ, ‘ಪಾನ್’ ಎಲೆಗಳ ಗಮ್ಮತ್ತನ್ನು ತಿಳಿಸಿದ್ದಾರೆ.

—ಕೆ.ಆರ್. ಜಯಲಕ್ಷ್ಮಿ, ಕಂಪಲಾಪುರ




## ಉಲ್ಲಾಸ ತುಂಬಿದ ಮಳೆ

‘ಇಳೆಗೆ ಇಳಿವ ಮಳೆ ನೋಡಲು’ (ಜುಲೈ 03) ಮಳೆ ಸಂಚಿಕೆ ಉಲ್ಲಾಸದಾಯಕವಾಗಿತ್ತು. ಧರೆಗೆ ಇಳಿವ ಮಳೆಯಿಂದಾಗಿ ಪ್ರಕೃತಿ ಹಸಿರಿನಿಂದ ಕಂಗೊಳಿಸುವ ಸೊಬಗು, ಮಣ್ಣಿನ ಸೊಗಡನ್ನು ಆಘ್ರಾಣಿಸುವ ಮಜಾ ವರ್ಣಿಸಲು ಪದಗಳೇ ಸಾಲದು.

ಮಳೆಗಾಲ ಚಾರಣಿಗರಿಗೆ ಬಹು ಆಪ್ಯಾಯಮಾನ ಹಾಗೂ ಪ್ರೇಮಿಗಳಿಗೂ ಮಳೆ ಎಂದರೆ ಬಲು ಪ್ರೀತಿ. ಮಳೆಯ ಹಾಡು ಬರೆಯದ ಕವಿಯೇ ಇಲ್ಲವೇನೋ.

ಮಳೆಗಾಲದಲ್ಲಿ ಆರೋಗ್ಯ ಕಾಪಾಡಲು ಅನೇಕ ಮನೆಮದ್ದುಗಳು, ಕಷಾಯ ಮುಂತಾದ ಸಲಹೆ ಸೂಚನೆಗಳೊಂದಿಗೆ ‘ಮೇಘ ಮಲ್ಹಾರ’ ಸಂಚಿಕೆ ಮುದ ನೀಡಿತು.

—ಮಧು

## ಮಳೆ ನೆನಪುಗಳು

ಶ್ರೀನಿಧಿ ಡಿ.ಎಸ್. ಅವರ ಲೇಖನ ಓದುತ್ತಾ ಮನಸ್ಸು 45 ವರ್ಷಗಳ ಹಿಂದಕ್ಕೆ ಓಡಿತು. ಮಳೆ ನೆನಪುಗಳಿಂದ ಮನಸ್ಸು ತುಂಬಿದಂತಾಯಿತು. ‘ಸುಧಾ’ದಲ್ಲಿ ಮಳೆ ಕುರಿತ ಲೇಖನ ಬಂದಾಗಲೆಲ್ಲಾ ನಾನು ಬಾಲ್ಯದಲ್ಲಿ ಜೋಗ್‌ಫಾಲ್ಸ್‌ನಲ್ಲಿ ಕಳೆದ ದಿನಗಳ ನೆನಪು ಮೂಡುತ್ತದೆ.

—ಡಾ. ಶೀಲಾ, ಬೆಂಗಳೂರು

## ಮಳೆ ಎಂಬ ಖುಷಿ

‘ಮಾಯದಂತ ಮಳೆ ಬಂತಣ್ಣ’ (ಬಿ.ಕೆ. ಸುಮತಿ) ‘ಸುರಿವಾ ಮಳೆ ನೀರೆಲ್ಲಾ’ (ಮಂಜುಶ್ರೀ ಎಂ. ಕಡಕೋಳ) ಬರಹಗಳು ನನ್ನ ಬಾಲ್ಯದ ಮಳೆಗಾಲ ನೆನಪಿಸಿತು. ಚಿಕ್ಕಮಗಳೂರಿನಲ್ಲಿ ನೆಲೆಸಿದ್ದ ದಿನಗಳಲ್ಲಿ ಮಳೆಯಲ್ಲಿ ನೆನೆದು ಮನೆಗೆ ಬಂದು ಬಿಸಿ ಬಿಸಿ ಬೋಂಡಾ, ಹಪ್ಪಳ, ಸಂಡಿಗೆ ಜೊತೆಗೆ ಘಮ ಘಮ ಕಾಫಿ ಸವಿಯುತ್ತಾ ಹಳೇ ಚಿತ್ರಗಳ ಹಾಡು ಕೇಳಿದ ಹಾಗೆ ಆಯಿತು.

—ಡಾ. ಎನ್.ಟಿ. ಅನಿಲ್, ಬೆಂಗಳೂರು



## ‘ಮೇಘ ಮಲ್ಹಾರ’ ವಿಶೇಷ

‘ಮೇಘ ಮಲ್ಹಾರ’ ಲೇಖನಗಳು ಸಿಹಿ ನೆನಪುಗಳ ಮಳೆಯಲ್ಲಿ ಮೀಯುವಂತೆ ಮಾಡಿದವು. ಈ ಸಂದರ್ಭ, ‘ಹುಯ್ಯೋ ಹುಯ್ಯೋ ಮಳೆರಾಯ’ ನೆಲದ ಸೊಗಡಿನ ಗೀತೆ ಆಪ್ತ ಎನಿಸುತ್ತದೆ. ಮಳೆ ಪ್ರವಾಸ, ಮಳೆ ಸಂಗೀತ, ಮಳೆಗೆ ಮನೆಮದ್ದು, ಮಳೆ ಫ್ಯಾಷನ್... ಅಂತೂ ಮಳೆ ಲೇಖನ ಪರಿಪೂರ್ಣ ಎನಿಸಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ನೊಂದ ಮನಸ್ಸುಗಳಿಗೆ ಬಲ

‘ಕೌಟುಂಬಿಕ ದೌರ್ಜನ್ಯಕ್ಕಿರಲಿ ಕಡಿವಾಣ’ (ಜು. 03, ರಶ್ಮಿ ಎಸ್) ‘ನಿಮ್ಮೊಡನೆ’ ಅರ್ಥಗರ್ಭಿತವಾಗಿದೆ. ಇಡೀ ಜಗತ್ತೇ ಹೆಣ್ಣುಮಕ್ಕಳ ವಿರುದ್ಧ ನಿಂತು, ಅವಳ ತೇಜೋವಧೆ ಮಾಡುತ್ತಾ, ಕಾನೂನು ದುರುಪಯೋಗ ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳುತ್ತಾ, ಇಡೀ ಮಹಿಳಾ ಸಮುದಾಯವನ್ನೇ ಅಪರಾಧಿಯನ್ನಾಗಿಸಿರುವಾಗ... ಈ ಸಂಪಾದಕೀಯ ಓದಿ ಮನಸ್ಸಿಗೆ ನೆಮ್ಮದಿಯಾಯ್ತು. ನಿಮ್ಮ ಮಾತುಗಳು ನೊಂದ ಮನಸ್ಸುಗಳಿಗೆ ನೂರಾನೆ ಬಲ ನೀಡುವಂತಿದೆ.

—ಕೆ.ಎ. ಸೌಮ್ಯ, ಮೈಸೂರು

## ಅಭಿಮಾನ ಮೂಡಿತು

‘ಮಗಳು ಬೆಳದಿಂಗಳು’ (ಜು. 03, ಬಿ.ಆರ್. ಸತ್ಯನಾರಾಯಣ) ಕಥೆಯಲ್ಲಿ, ಜಾತಿಭೇದ ನೋಡದೆ ಉಮಾಳನ್ನು ಮನಸಾರೆ ಪ್ರೀತಿಸಲಾರಂಭಿಸಿ, ತನ್ನ ತಂದೆಯ ಮಾತನ್ನು ಧಿಕ್ಕರಿಸಿ ಮದುವೆಯಾಗಿ



ಬದುಕು ಕಟ್ಟಿಕೊಂಡ ರಾಜು ಬಗ್ಗೆ ಖುಷಿ ಎನಿಸಿತು. ಕೊನೆಗೆ ತಾನು ಗಾರ್ಮೆಂಟ್ ಕೆಲಸ ಬಿಟ್ಟು ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದೇನೆಂದು ತನ್ನ ಪುಟ್ಟ ಮಗಳಿಗೆ ಹೇಳಿದಾಗ ಮರ್ಯಾದೆಯಿಂದ ದುಡಿದು ಬದುಕುವವರಿಗೆ ಯಾವುದೇ ಕೆಲಸ ಕೀಳಲ್ಲ ಎಂದು ಹೇಳಿದ ಮಗಳ ಬಗ್ಗೆ ಅಭಿಮಾನ ಮೂಡಿತು.

—ಎಂ.ಟಿ. ರಮಾನಂದ ರೆಡ್ಡಿ, ಚಿತ್ರದುರ್ಗ

## ನಗೆಯ ಲೇಪನದ ‘ನೀವು ಕೇಳಿದಿರಿ’

‘ನೀವು ಕೇಳಿದಿರಿ’ ವಿಭಾಗದಲ್ಲಿ ಓದುಗರ ಪ್ರಶ್ನೆಗಳಿಗೆ ತುಂಬಾ ಮಾರ್ಮಿಕವಾದ ಉತ್ತರಗಳನ್ನು ರಾಮ್ ನೀಡುತ್ತಾರೆ.

ಅವರು ಓದುಗರ ಪ್ರಶ್ನೆಗಳನ್ನು ನೋಡುವ ದೃಷ್ಟಿಕೋನ ಮತ್ತು ಉತ್ತರಿಸುವ ಪರಿ ತುಂಬಾ ಕೌತುಕವಾಗಿರುತ್ತದೆ. ಹಲವರು ಕುಹಕ ಪ್ರಶ್ನೆಗಳನ್ನು ಕೇಳಿದ್ದರೂ ಅವುಗಳಿಗೆ ನಗೆಯ ಲೇಪನದಿಂದ ಉತ್ತರಿಸುತ್ತಾರೆ. ಒಮ್ಮೊಮ್ಮೆ ತತ್ವಜ್ಞಾನಿಯ ಮುಕ್ತಕಗಳಂತೆ, ಸ್ನೇಹಿತರ ಸಲಹೆಯಂತೆ, ಇನಿಯಳ ಒಲವಿನ ಮಾತುಗಳಂತೆ ಉತ್ತರಗಳು ಇರುತ್ತವೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಹೃದಯದ ಭಾಷೆ

‘ಎಲ್ಲೆಲ್ಲು ಸಂಗೀತವೇ’ (ಜೂ. 26, ಉಮಾ ವೇಣೂರು) ಬರಹ ಇಷ್ಟವಾಯಿತು. ಸಂಗೀತ ಜಾತ್ಯತೀತ, ಧರ್ಮಾತೀತ, ಭಾಷಾತೀತ. ಮನಸ್ಸಿನ ಮೇಲೆ ಸಂಗೀತ ಬೀರುವ ಪರಿಣಾಮ, ರೋಗ ಗುಣಪಡಿಸುವ ಚಿಕಿತ್ಸಕ ಗುಣ, ಸಂಗೀತದ ಬಗೆಗಳು, ಸ್ವರೂಪದ ವಿವರಗಳನ್ನು ನೀಡುತ್ತಲೇ ನಮ್ಮನ್ನು ನಮಗೆ ಅರಿವಿಲ್ಲದಂತೆಯೇ ಸಂಗೀತಲೋಕಕ್ಕೆ ಕರೆದೊಯ್ಯುವ ಶಕ್ತಿ ಬರಹದಲ್ಲಿದೆ.

— ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in